Mr. SPEAKER.—What is your question, Sri Linga Reddy?

Sri H. C. LINGA REDDY.— My question was whether it is a fact that since there are no doctors in a number of hospitals in the State, is it true that the compounders themselves are dispensing medicine in the hospital?

Mr. SPEAKER.—The Chief Minister is very technical to-day! (Laughter).

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಸಂಸ್ಥಾನದಲ್ಲಿ ಎಷ್ಟೋ ಆಸ್ಪತ್ರೆಗಳಲ್ಲಿ 6 ತಿಂಗಳು, ವರ್ಷಗಟ್ಟಲೆ ಡಾಕ್ಟರುಗಳೇ ಇರುವುದಿಲ್ಲ ಅಲ್ಲವೇ, ಸ್ವಾಮಿ?

Sri K. HANUMANTHAIYA.—That is an exaggerated statement. We have already answered a series of questions on this subject.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೋಲಾರ ಜಿಲ್ಲೆಯಲ್ಲಿ ಹೋಳೂರು ಎಂಬ ಹೋಬಳಿ ಹೆಡ್‌ಕ್ವಾರ್ಟರ್ಸ್ ಡಿಸ್ಪೆನ್ಸರಿಯಲ್ಲಿ ಎಷ್ಟು ವರ್ಷಗಳಿಂದ ಡಾಕ್ಟರು ಇಲ್ಲ, ಸ್ವಾಮಿ?

Sri T. CHANNIAH.—Notice please.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ಡಾಕ್ಟರುಗಳಿಗೆ ಸಂಬಳ ಬಹಳ ಕಡಿಮೆ ಇರುವುದರಿಂದ ಅನೇಕರು ಈ ಕೆಲಸಕ್ಕೆ ಬರುತ್ತಾ ಇಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

Mr. SPEAKER.—That was answered.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ವಾರ್ ಸರ್ವೀಸ್‌ನಿಂದ ಬಂದಿರತಕ್ಕ ಡಾಕ್ಟರುಗಳಿಗೆ ವಾರ್ ಕಾಲದಲ್ಲಿ ಸಂಬಳ ಜಾಸ್ತಿ ಬರುತ್ತಾ ಇದ್ದುದರಿಂದ ಅವರಿಗೆ ಹೆಚ್ಚು ಸಂಬಳ ಕೊಡುತ್ತಾ ಇದ್ದೀರಾ?

Sri K. HANUMANTHAIYA.—Sir, we cannot carry on warfare in order to keep the Doctors' salary high.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಡಾಕ್ಟರುಗಳ ಅಭಾವ ಇರುವಾಗ ನಿವೃತ್ತರಾಗಿರುವ ಡಾಕ್ಟರುಗಳನ್ನು ಪುನಃ ನಿಯಮಿಸಿಕೊಳ್ಳುವುದಕ್ಕಾಗುವುದಿಲ್ಲವೇ?

Sri K. HANUMANTHAIYA.—That is one of the suggestions we are examining in view of the prevailing conditions.

ಶ್ರೀ ಕೆ. ವಿ. ಬೈರೇಗೌಡ.—ಸರ್ಕಾರಿ ಡಾಕ್ಟರುಗಳು ಪ್ರೈವೇಟ್ ಪ್ರಾಕ್ಟಿಸ್ ಮಾಡುವುದಕ್ಕೆ ಸರ್ಕಾರ ಅನುಮತಿ ಕೊಟ್ಟಿದೆಯೇ?

Sri T. CHANNIAH.—Yes, Sir, they have been permitted according to rules.

ಶ್ರೀ ಬಿ. ಸಿ. ನಂಜುಂಡಯ್ಯ.—ಡಾಕ್ಟರುಗಳ ಅಭಾವ ಇದೆ ಎಂದು ಹೇಳಿದಿರಿ. ಸುಮಾರು 80 ಜನ ಮೆಡಿಕಲ್ ಗ್ರ್ಯಾಜ್ಯುಯೇಟುಗಳಿಗೆ ಅಪಾಯಿಂಟ್‌ಮೆಂಟ್ ಇಲ್ಲದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri K. HANUMANTHAIYA.—We have taken steps to recruit and the Public Service Commission has been asked to look into the matter.

ಶ್ರೀ ಬಿ. ಸಿ. ನಂಜುಂಡಯ್ಯ.—49 ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ ಎಂದು ಹೇಳಿದ್ದೀರಿ. ಅಪಾಯಿಂಟ್‌ಮೆಂಟ್ ಇಲ್ಲದೇ ಇರುವ ಡಾಕ್ಟರುಗಳು ಇರುವಾಗ ಅವರನ್ನು ಏಕೆ ಆ ಜಾಗಗಳಿಗೆ ಫಿಲ್ ಅಪ್ ಮಾಡಲಿಲ್ಲ?

Sri K. HANUMANTHAIYA.—We are taking steps. We are not keeping quiet on the subject.

ಶ್ರೀ ಬಿ. ಸಿ. ನಂಜುಂಡಯ್ಯ.—ಎಷ್ಟು ವರ್ಷಗಳಿಂದ ಸ್ವಾಮಿ, ತುಮಕೂರು ಡಿಸ್ಪೆನ್ಸರಿಯ ಬಡವನಹಳ್ಳಿ ಮತ್ತು ಮಂಗಳವಾಡ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲ? ನುಮಾರು 4 ವರ್ಷಗಳಿಂದಲೂ ಡಾಕ್ಟರುಗಳು ಇಲ್ಲದೇ ಇರುವುದು ಗೊತ್ತೇ?

Sri K. HANUMANTHAIYA.—It has not come to our notice. I will look into it.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮೆಡಿಕಲ್ ಸ್ಕೂಲು ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಈ ವರ್ಷ ಎಷ್ಟು ಜನ ನರ್ಸಾನರಿ ಪಾಸು ಆಗಿದ್ದಾರೆ?

Sri T. CHANNIAH.—I want notice.

Mr. SPEAKER.—There was a question on the second day relating to this.

ಶ್ರೀ ಡಿ. ವೆಂಕಟೇಶ್.—ಡಾಕ್ಟರುಗಳನ್ನು ಟ್ರಾನ್ಸ್‌ಫರ್ ಮಾಡುತ್ತೇವೆ ಎಂದು ಹೇಳಿದ ಮೇರೆ ಹುಚ್ಚಾನ್ಸತ್ರೆಗಳಿಗೂ ಕೂಡ ಕಳುಹಿಸುತ್ತೀರಿ ತಾನೆ?

ಶ್ರೀ ಕೆ. ಹನುಮಂತಯ್ಯ.—ಹುಚ್ಚಾನ್ಸತ್ರೆಯಲ್ಲೂ ಡಾಕ್ಟರುಗಳು ಇದ್ದಾರೆ. ಕೆಲವು ಡಾಕ್ಟರುಗಳನ್ನು ಅಲ್ಲಿಗೂ ಕಳುಹಿಸುತ್ತೇವೆ.

Drinking water wells in Villages of Mysore Taluk.

Q.—516. Sri SHIVANANJE GOWDA (Mysore Taluk).—

Will the Government be pleased to state :—

(*a*) the names of villages in Mysore Taluk in which drinking water wells have been sunk ;

(*b*) the number of villages which have made representations for drinking water wells and the action taken thereon ;

(*c*) whether they intend to make arrangements for providing wells to the villages which have recently asked for new wells ?

A.—Sri T. CHANNIAH (Minister for Public Health and Local Self-Government).—

(*a*) List appended below.

(*b*) 23 villages. The representations are being examined and estimate prepared in some cases.

(SRI T. CHANNIAH.)

(c) It is proposed to assist the villages which show some initiative in this behalf, and where the need is urgent with larger grants from the Land Revenue assignment, and provide as many wells as possible.

Statement showing the names of villages in Mysore Taluk in which the drinking water wells have been sunk.—

1 Srirampur
2 Hinkal
3 Hutagalli
4 Naganahalli
5 Lakshmipur
6 Hebbal
7 Dattagalli
8 Bogadi
9 Kesare
10 Kalasthavadi
11 Bandipalya
12 Yeraganahalli
13 Alanahalli
14 Nadanahalli
15 Hanchya
16 Ramanahalli
17 Siddalingapura
18 Bugatagalli
19 Megalapura
20 Keelanapura
21 Pillahalli
22 Varuna
23 Dandikeni
24 Vajamangala
25 Chikkahalli
26 Chavanahalli
27 Archahalli
28 Marse
29 Chetnahalli
30 Varakodu
31 Lalitadripura
32 S. Uttanahalli
33 Kemdaraiatty
34 Someswarapura
35 Kochanahalli
36 Dyavalapura
37 Kumaranahalli
38 Hadajana
39 Marasettihalli
40 Dadadahalli
41 Doddakanya
42 Jaipura
43 Dasipura
44 Boradarapura
45 Ballahalli
46 Marahalli
47 Kenchalagol
48 Arasinakere
49 Chikkanya
50 Udabur
51 Keragahalli
52 Martikyathahalli
53 Harohalli
54 Gajjegowdapur
55 Chamahalli
56 Handahalli
57 Danagalli
58 Tolur
59 Chikkanahalli
60 Nuggehalli
61 Doddaraagowdanahalli
62 Bommanahalli
63 Nagavala
64 Harohalli
65 Yelachanahalli
66 Rattahally
67 Kallurnaganahalli
68 Sagarahatty
69 Gungralchatra
70 Anandur
71 Huyalalu
72 Madagalli
73 Yelwal

ಶ್ರೀ ಶಿವನಂಜೇಗೌಡ.—(a) ಪ್ರಶ್ನೆಗೆ ಉತ್ತರವಾಗಿ ವಿವರಗಳನ್ನೊಳಗೊಂಡ ಪಟ್ಟಿಯನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ ಎಂದು ಹೇಳಿದ್ದೀರಿ. ಆ ಬಾವಿಗಳಲ್ಲಿ ನೀರೇ ಇಲ್ಲ. ಅವನ್ನು ಆಳಪಡಿಸಬೇಕೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಶಿವನಂಜೇಗೌಡ.—ಅವನ್ನು ಆಳಪಡಿಸುವುದಕ್ಕೆ ಏನಾದರೂ ಏರ್ಪಾಡು ಮಾಡಿದ್ದೀರಾ ?

ಶ್ರೀ ಕೆ. ಹನುಮಂತಯ್ಯ.—ಆ ಬಾವಿಗಳನ್ನೆಲ್ಲಾ ಪೂರ್ತಿಮಾಡಬೇಕೆಂಬುದೇ ನಮ್ಮ ಉದ್ದೇಶ. ಅದನ್ನು ಮಾಡುತ್ತೇವೆ.

ಶ್ರೀ ಶಿವನಂಜೇಗೌಡ.—ಹೊಸದಾಗಿ ಬಾವಿಗಳು ಬೇಕು ಎಂದು ಆ ತಾಲ್ಲೂಕಿನಲ್ಲಿ ಈ ವರ್ಷ 23 ಗ್ರಾಮಗಳಿಂದ ಮನವಿ ಬಂದಿದೆ ಎಂದು ಹೇಳಿದ್ದೀರಿ. ಇನ್ನು ಯಾವ ಗ್ರಾಮದಿಂದಲೂ ಬಂದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದೆ.

ಶ್ರೀ ಶಿವನಂಜೇಗೌಡ.—23 ಗ್ರಾಮಗಳಿಂದ ಮನವಿಗಳು ಬಂದಿರುತ್ತವೆ ಎಂದು ಇದರಲ್ಲಿ ಇದೆ. ಅವಶ್ಯಕತೆಯು ಜರೂರಾಗಿರತಕ್ಕ ಗ್ರಾಮಗಳಿಗೆ ಜಮೀನು ಕಂದಾಯದ ಹಣದಿಂದ ಹೆಚ್ಚು ಗ್ರಾಂಟನ್ನು ಕೊಟ್ಟು ಬಾವಿಗಳನ್ನು ಏರ್ಪಡಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದೀರಿ. ಒಂದು ಊರಿನಲ್ಲಿ 100 ರೂಪಾಯಿ ಕಂದಾಯ ಇರುತ್ತದೆ, ಇನ್ನೊಂದು ಊರಿನಲ್ಲಿ 50 ರೂಪಾಯಿ ಕಂದಾಯ ಇರುತ್ತದೆ. ಇಷ್ಟು ಹಣ ಅದಕ್ಕೆ ಸಾಕಾಗುತ್ತದೆಯೇ ?

ಶ್ರೀ ಕೆ. ಹನುಮಂತಯ್ಯ.—ಸಾಕಾಗುವುದಿಲ್ಲ.

ಶ್ರೀ ಶಿವನಂಜೇಗೌಡ.—ಮತ್ತೆ ಅದಕ್ಕೆ ಏನು ಏರ್ಪಾಡು ಮಾಡಿದ್ದೀರಿ ?

ಶ್ರೀ ಕೆ. ಹನುಮಂತಯ್ಯ.—ನಿಂತಿರತಕ್ಕ ಬಾವಿಗಳು ಮತ್ತು ಹೊಸ ಬಾವಿಗಳನ್ನು ತೆಗೆಯುವುದು, ಇವಕ್ಕೆ ಬಡ್ಜೆಟ್‌ನಲ್ಲಿ ಬೇರೆ ಹಣವನ್ನು ಒದಗಿಸಲಾಗಿದೆ.

ಶ್ರೀ ಶಿವನಂಜೇಗೌಡ.—ಈಗ ನಮ್ಮ ತಾಲ್ಲೂಕಿನಲ್ಲಿ ಬಹಳವಾಗಿ ನೀರಿನ ಅಭಾವ ಇದ್ದು 3 ತಿಂಗಳಿಗೆ ಒಂದು ಸಾರಿ ಸ್ನಾನಮಾಡತಕ್ಕ ಜನ ಇದ್ದಾರೆ. ಆದ್ದರಿಂದ ಸ್ವಲ್ಪ ಜಾಗ್ರತೆ ನೀರಿನ ಏರ್ಪಾಡು ಮಾಡಿಸಿಕೊಡುತ್ತೇವೆ ಎಂದು ಅಷ್ಯೂರೆನ್ಸ್ ಕೊಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ನೀರು ಕೊಡಬಹುದು. ಸ್ನಾನ ಮೂರು ತಿಂಗಳಿಗೆ ಒಂದು ಸಾರಿ ಮಾಡಕೂಡದು ಎಂದು ಹೇಳುವುದಕ್ಕಾಗುವುದಿಲ್ಲ (ನಭೆಯಲ್ಲಿ ನಗು !).

ಶ್ರೀ ಶಿವನಂಜೇಗೌಡ.—ಅಲ್ಲ ನದಿ, ಕೆರೆ ಯಾವುದೂ ಹತ್ತಿರ ಇಲ್ಲದೇ ಇರುವುದರಿಂದ ಬಾವಿ ನೀರಿನಿಂದಲೇ ಸ್ನಾನ ಮಾಡಬೇಕು. ಆ ಸೌಕರ್ಯ ಇಲ್ಲದೇ 3 ತಿಂಗಳಿನಿಂದ ಸ್ನಾನಮಾಡಿಲ್ಲ ಎಂದು ಹೇಳಿದೆ ಅಷ್ಟೆ, ಸ್ವಾಮಿ.

ಶ್ರೀ ಕೆ. ಲಕ್ಕಪ್ಪ.—ಈ ಬಾವಿಗಳನ್ನು ಕಂಪ್ಲೀಟ್ ಮಾಡಿರತಕ್ಕ ಅನೇಕ ಕಂಟ್ರಾಕ್ಟರುಗಳಿಗೆ ಈಗ 3 ವರ್ಷಗಳಿಂದಲೂ ಪೇಮೆಂಟ್ ಆಗಿಲ್ಲದೇ ಇರುವುದು ಸರ್ಕಾರದವರಿಗೆ ಗೊತ್ತಿದೆಯೇ ?

Sri K. HANUMANTHAIYA.—There may be such cases. But I am not aware of the details.

ಶ್ರೀ ಕೆ. ಲಕ್ಕಪ್ಪ.—ನಪ್ಲಿಮೆಂಟರಿ ಗ್ರಾಂಟ್ ಬೇಕು ಎಂದು ಡೆಪ್ಯುಟಿ ಕಮಿಷನರವರು ಬರೆದಿರುವುದು ಗೊತ್ತೇ ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ಕೆ ಲಕ್ಕಪ್ಪ.—ನಪ್ಲಿಮೆಂಟರಿ ಗ್ರಾಂಟ್ ಪ್ರೊವೈಡ್ ಮಾಡಿದ್ದೀರಾ ?

Sri K. HANUMANTHAIYA.—I have already answered that question that funds will be made available.

ಶ್ರೀ ಕೆ ಲಕ್ಕಪ್ಪ.—ಈಗ ನಪ್ಲಿಮೆಂಟರಿ ಗ್ರಾಂಟನ್ನು ಕೊಟ್ಟಿದ್ದೀರಾ ?

Mr. SPEAKER.—You will come to know at 11 O' Clock.

Minor and Major Irrigation Works in Holalkere Taluk.

Q.—194. Sri G. SIVAPPA (Holalkere).—

Will the Government be pleased to state :—

(*a*) the number of minor and major irrigation works that are under consideration in Holalkere Taluk ;

(*b*) since what time the feeder channel to Kunagali and Hulimalali tanks from Magadi *halla* is pending construction ;

(*c*) what are the reasons for the delay ?

A.—Sri Kadidal MANJAPPA (Minister for Revenue and Public Works).—

(*a*) Major	...	...	5
Minor	...	...	1

(*b*) The question is under consideration since 1946.

(*c*) An estimate prepared in 948 was under correspondence between the Public Works and Revenue Department . A revised estimate has now been prepared and is under scrutiny.

ಶ್ರೀ ಜಿ. ಶಿವಪ್ಪ.—ಮೇಜರ್ ವರ್ಕ್ಸ್ 5 ಎಂದ ಹೇಳಿದ್ದೀರಿ. ಈ 5 ಯಾವುವು ?

Sri Kadidal MANJAPPA.—Constructing a new tank at Bammanayaknadurga ; improving the Holalkere feeder channel ; constructing a new tank across Gadari Halla; constructing a new tank at Dugganahalli village ; opening a feeder channel for Hulinal tank from Magadi Halla.

ಶ್ರೀ ಜಿ. ಶಿವಪ್ಪ.—ಇವನ್ನು ಜಾಗ್ರತೆಯಾಗಿ ಮಾಡಿಸಬೇಕೆಂದು $1\frac{1}{2}$ ವರ್ಷದ ಹಿಂದೆ ಅರ್ಜಿ ಕೊಟ್ಟಿರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು ಕೊಟ್ಟಿದ್ದರು.

ಶ್ರೀ ಜಿ. ಶಿವಪ್ಪ.—ಈಗ 7-8 ವರ್ಷಗಳಿಂದಲೂ ರೆಕಾರ್ಡ್ ಪೆಂಡಿಂಗ್‌ನಲ್ಲಿರುವುದು ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಜಿ ಕೊಟ್ಟ ಕೂಡಲೇ ಎಲ್ಲವನ್ನೂ ತಕ್ಷಣ ಮಾಡುವುದಕ್ಕಾಗುವುದಿಲ್ಲ. ಕೆಲವು, they are prohibitively costly. We cannot take up some projects. Some estimates in respect of works are under scrutiny.

Sri G. SIVAPPA.—Feeder channels to Kunagali and Hulimalali tanks—were they not sactioned by the Revenue Department ?

Sri Kadidal MANJAPPA.—No. Only estimates were sanctioned by the P-W.D., and not by the Revenue Department.